ದಿನಾಂಕಃ21.03.2025 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ 5ನೇ ಎದುರುದಾರರ ಪರಃ ಶ್ರೀ ಎನ್ ಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನಗೆ ನೀಡಿರುವ ಅಧಿಕಾರ ಪತ್ರವನ್ನು ನಿ ಆರ್ 3 ಎಂದು, ಅಪಘಾತಪಡಿಸಲಾಗಿದೆ ಎಂದು ಹೇಳಿರುವ ವಾಹನದ ಪಾಲಿಸಿಯ ದೃಡೀಕೃತ ನಕಲನ್ನು ನಿಆರ್ 4 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಸಿ ಕೆ ಎಸ್ ವಕೀಲರಿಂದಃ

ಕೆಎ-09-ಹೆಚ್ ಜಿ-6149 ಎಂಬ ವಾಹನಕ್ಕೆ ಅಪಘಾತ ಸಮಯದಲ್ಲಿ ನಮ್ಮ ಕಂಪನಿಯ ಬಂಡಲ್ ಪಾಲಿಸಿ ಚಾಲ್ತಿಯಲ್ಲಿ ಇತ್ತು. ಸದರಿ ಅಪಘಾತದ ಸಮಯದಲ್ಲಿ ಕೆಎ-09-ಹೆಚ್ ಜಿ-6149 ವಾಹನವನ್ನು ಚಲಾಯಿಸುತ್ತಿದ್ದ ಸಲ್ಮಾನ್ ಹುಸೇನ್ ಬಳಿ ಡಿ ಎಲ್ ಇತ್ತು ಎಂದರೆ ಸರಿ. ಅಪಘಾತವಾದಾಗ ಇನಾಯತ್ ಷರೀಫ್ ದ್ವಿ ಚಕ್ರ ವಾಹನದಲ್ಲಿ ಹಿಂಬದಿ ಸವಾರನಾಗಿ ಕುಳಿತುಕೊಂಡು ಹೋಗುತ್ತಿದ್ದ ಎಂದರೆ ಸರಿ. ಕೆಎ-09-ಹೆಚ್ ಜಿ-6149 ಕ್ಕೆ ಬಂಡಲ್ ವಿಮೆ ಪಾಲಿಸಿ ಚಾಲ್ತಿಯಿದ್ದ ಕಾರಣ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸಾಕ್ಷಿ ಲಾರಿ ಚಾಲಕನ ವಿರುದ್ದ ಹಾಗೂ ಅದರ ಮಾಲೀಕರ ವಿರುದ್ದ ಚಾರ್ಜ್ ಶೀಟ್ ಸಲ್ಲಿಸಿರುವುದಕ್ಕೆ ನಾವು ಪರಿಹಾರ ಕೊಡಲು ಬಾಧ್ಯರಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳುವ ದುರುದ್ದೇಶದಿಂದ ನಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.